## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಡಿ.ದೇವರಾಜ ಅರಸು ಸಂಶೋಧನಾ ಸಂಸ್ಥೆಯು 2022-23ನೇ ಸಾಲಿನಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾರ್ಯಕ್ರಮಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:-** ನಿರ್ದೇಶಕರು, ಡಿ. ದೇವರಾಜ ಅರಸು, ಸಂಶೋಧನಾ ಸಂಸ್ಥೆಯ ಏಕಕಡತ ಪ್ರಸ್ತಾವನೆಯ ಸಂ:ದೇಸಂಸಂ/ ಕ್ರಿಯಾ ಯೋಜನೆ/ಸಿಆರ್-01/ 2022-23, ದಿನಾಂಕ: 19.09.2022.

******

**ಪ್ರಸ್ತಾವನೆ:-**

ಮೇಲೆ ಓದಲಾದ ಪ್ರಸ್ತಾವನೆಯಲ್ಲಿ ವಿಶ್ವಕರ್ಮ ಜನಾಂಗ ಹಾಗೂ ಅದರ ಉಪಪಂಗಡಗಳ (ಗೆಜ್ಜೆಗಾರ ಜನಾಂಗ ಒಳಗೊಂಡಂತೆ) ಕುಲಶಾಸ್ತ್ರೀಯ ಅಧ್ಯಯನವನ್ನು ಮೈಸೂರು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ನಡೆಸುವಂತೆ ತೀರ್ಮಾನಿಸಲಾಗಿರುತ್ತದೆ. ಹಾಗೂ 2022-23ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ರಾಜ್ಯವಲಯ ಲೆಕ್ಕಶೀರ್ಷಿಕೆ:2225-03-277-2-08(059) "ದೇವರಾಜ ಅರಸು ಸಂಶೋಧನಾ ಸಂಸ್ಥೆ ಹಾಗೂ ಇತರೆ ಕಾರ್ಯಕ್ರಮಗಳು" ಕಾರ್ಯಕ್ರಮದಡಿ ರೂ.75.00 ಲಕ್ಷಗಳನ್ನು ಒದಗಿಸಲಾಗಿದ್ದು, ಸದರಿ ಅನುದಾನದಲ್ಲಿ ದೇವರಾಜ ಅರಸು ಸಂಶೋಧನಾ ಸಂಸ್ಥೆಗೆ ಒಟ್ಟು ರೂ.18.75 ಲಕ್ಷಗಳನ್ನು ಮರುಹಂಚಿಕೆ ಮಾಡಲಾಗಿದೆ. ಈ ಅನುದಾನದಲ್ಲಿ ರಾಜ್ಯದ ಮೈಸೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ/ಮಾನವಶಾಸ್ತ್ರ ವಿಭಾಗದ ಸಹಯೋಗದೊಂದಿಗೆ ವಿಶ್ವಕರ್ಮ ಹಾಗೂ ಅದರ ಉಪಜಾತಿಗಳ (ಗೆಜ್ಜೆಗಾರ ಜನಾಂಗ ಒಳಗೊಂಡಂತೆ) ಕುಲಶಾಸ್ತ್ರೀಯ ಅಧ್ಯಯನ, ವಿಚಾರ ಸಂಕಿರಣ, ಕಾರ್ಯಾಗಾರ ನಡೆಸಲು ಹಾಗೂ ಸಾಕ್ಷ್ಯಚಿತ್ರಗಳನ್ನು ತಯಾರಿಸಲು ಕ್ರಿಯಾಯೋಜನೆಗೆ ಅನುಮೋದನೆ ನೀಡಬೇಕೆಂದು ಕೋರಿ ನಿರ್ದೇಶಕರು, ದೇವರಾಜ ಅರಸು ಸಂಶೋಧನಾ ಸಂಸ್ಥೆ ರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 611 ಬಿಎಂಎಸ್ 2022, ಬೆಂಗಳೂರು, ದಿನಾಂಕ:17-11-2022.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯು 2022-23 ನೇ ಸಾಲಿನಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಈ ಕೆಳಕಂಡ ಕಾರ್ಯಕ್ರಮಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಯೋಜನಾ ಕಾರ್ಯಕ್ರಮಗಳು | ಮೊತ್ತ |
|---|---|---|
| 1 | ರಾಜ್ಯದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಮಾಜಶಾಸ್ತ್ರ ಮಾನವಶಾಸ್ತ್ರ ವಿಭಾಗದ ಸಹಯೋಗದೊಂದಿಗೆ ವಿಶ್ವಕರ್ಮ ಜನಾಂಗ ಹಾಗೂ ಅದರ ಉಪಪಂಗಡಗಳ (ಗೆಜ್ಜೆಗಾರ ಜನಾಂಗ ಒಳಗೊಂಡಂತೆ) ಕುಲಶಾಸ್ತ್ರೀಯ ಅಧ್ಯಯನ | 10.00 |

| | | |
|---|---|---|
| 2 | ವಿಶ್ವಕರ್ಮ ಜನಾಂಗ ಹಾಗೂ ಅದರ ಉಪಪಂಗಡಗಳ (ಗೆಜ್ಜೆಗಾರ ಜನಾಂಗ ಒಳಗೊಂಡಂತೆ) ಸಮಗ್ರ ಸ್ಥಿತಿಗತಿಗಳ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣ (ಕುಲಶಾಸ್ತ್ರೀಯ ಅಧ್ಯಯನ ನಡೆಸುವ ವಿಶ್ವವಿದ್ಯಾನಿಲಯದಿಂದಲೇ) | 4.00 |
| 3 | ವಿಶ್ವಕರ್ಮ ಜನಾಂಗ ಹಾಗೂ ಅದರ ಉಪಪಂಗಡಗಳ (ಗೆಜ್ಜೆಗಾರ ಜನಾಂಗ ಒಳಗೊಂಡಂತೆ) ಸಮಗ್ರ ಅಭಿವೃದ್ಧಿಗಾಗಿ ರಾಜ್ಯಮಟ್ಟದ ಕಾರ್ಯಾಗಾರ (ಕುಲಶಾಸ್ತ್ರೀಯ ರಾಜ್ಯಮಟ್ಟದ ಕಾರ್ಯಾಗಾರ ಅಧ್ಯಯನ ನಡೆಸುವ ವಿಶ್ವವಿದ್ಯಾನಿಲಯದಿಂದಲೇ) | 2.00 |
| 4 | ವಿಶ್ವಕರ್ಮ ಜನಾಂಗ ಹಾಗೂ ಅದರ ಉಪಪಂಗಡಗಳ ಗೆಜ್ಜೆಗಾರ ಜನಾಂಗ ಒಳಗೊಂಡಂತೆ) ಸ್ಥಿತಿ-ಗತಿಗಳ ಬಗ್ಗೆ ಈ ಕೆಳಕಂಡ ಅಂಶಗಳ 3 ಸಾಕ್ಷ್ಯಚಿತ್ರಗಳು (ಡಿ. ದೇವರಾಜ ಅರಸು ಸಂಸ್ಥೆಯ ವತಿಯಿಂದ)<br>1) ಸಾಮಾಜಿಕ ಸ್ಥಿತಿ-ಗತಿ<br>2) ಧಾರ್ಮಿಕ-ಸಾಂಸ್ಕೃತಿಕ ಸ್ಥಿತಿ-ಗತಿ<br>3) ಆರ್ಥಿಕ-ಶೈಕ್ಷಣಿಕ-ಔದ್ಯೋಗಿಕ ಸ್ಥಿತಿ-ಗತಿ | 2.75 |
| | ಒಟ್ಟು ಮೊತ್ತ | 18.75 |

ಈ ಯೋಜನೆಗೆ ತಗಲುವ ವೆಚ್ಚವನ್ನು ರಾಜ್ಯವಲಯ ಲೆಕ್ಕಶೀರ್ಷಿಕೆ:2225-03-277-2-08 ಅಬ್ಜೆಕ್ಟಿವ್ ಕೋಡ್ (059) ರಡಿಯಲ್ಲಿ ಭರಿಸತಕ್ಕದ್ದು.

**ಷರತ್ತು/ನಿಬಂಧನೆಗಳು:-**

1. ಸದರಿ ಅಧ್ಯಯನಗಳನ್ನು/ಯೋಜನೆಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ನಿರ್ದೇಶಕರು, ಡಿ.ದೇವರಾಜ ಅರಸು ಸಂಶೋಧನಾ ಸಂಸ್ಥೆ ರವರು ನಡೆಸತಕ್ಕದ್ದು.
2. ಸದರಿ ಯೋಜನೆಯಲ್ಲಿ ಸಾಧಿಸುವ ಆರ್ಥಿಕ ಮತ್ತು ಭೌತಿಕ ಪ್ರಗತಿಯ ಮಾಹಿತಿಯನ್ನು ಆಯುಕ್ತಾಲಯ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಅಧಿಕೃತ ಜಾಲತಾಣದಲ್ಲಿ ನಿರ್ದೇಶಕರು, ಡಿ.ದೇವರಾಜ ಅರಸು ಸಂಶೋಧನಾ ಸಂಸ್ಥೆ ಇವರು ಪ್ರಚುರಪಡಿಸತಕ್ಕದ್ದು.

ಈ ಆದೇಶವನ್ನು ಮಾನ್ಯ ಇಲಾಖಾ ಸಚಿವರ ಅನುಮೋದನೆ ಹಾಗೂ ಸರ್ಕಾರದ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕದ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

Shaheenparveen 17/11/2022

(ಶಾಹೀನ್ ಪರ್ವೀನ್ .ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ), ಬೆಂಗಳೂರು.
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ, ಬೆಂಗಳೂರು.
4. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.

......3

ಪ್ರತಿ ಮಾಹಿತಿಗಾಗಿ:-

1. ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಸಹಾಯಕರು, ವಿಕಾಸಸೌಧ.
4. ಸರ್ಕಾರದ ಅಧೀನ ಕಾರ್ಯದರ್ಶಿ 1 & 2 ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ-1, (ಸಮನ್ವಯ), ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಇಲಾಖಾ ಜಾಲತಾಣದಲ್ಲಿ ಅಪ್‌ಲೋಡ್ ಮಾಡಲು ಕ್ರಮವಹಿಸುವುದು.
6. ಶಾಖಾ ರಕ್ಷಾ ಕಡತ.

********